ಕರ್ನಾಟಕ ಸರ್ಕಾರ

ಸಂ: ಆಇ 98 ವೆಚ್ಚ 6/2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:17.8.2020

**ಅತೀ ಜರೂರು**

## ಅನಧಿಕೃತ ಟಿಪ್ಪಣಿ

ವಿಷಯ: ಜಿಲ್ಲಾ/ತಾಲ್ಲೂಕು ಪಂಚಾಯತಿಗಳಲ್ಲಿ ದಿನಗೂಲಿ/ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರುಗಳಿಗೆ ವೇತನ/ಸಂಭಾವನೆಗಾಗಿ ಹೆಚ್ಚುವರಿ ಅನುದಾನವನ್ನು ಕೋರಿರುವ ಬಗ್ಗೆ

ಉಲ್ಲೇಖ: ಈ ಕಾರ್ಯಾಲಯದ ಸಮಸಂಖ್ಯೆ ಪತ್ರ ದಿನಾಂಕ:26.5.2020

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದೆಡೆಗೆ ತಮ್ಮ ಗಮನವನ್ನು ಸೆಳೆಯಲಾಗಿದೆ. 2020-21ನೇ ಸಾಲಿನ ಆಯವ್ಯಯ ತಯಾರಿಕೆಯ ವೇಳೆಯಲ್ಲಿ ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿಗಳಲ್ಲಿ ದಿನಗೂಲಿ/ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರುಗಳ ಮತ್ತು ಅವರುಗಳಿಗೆ ಪಾವತಿಸಲಾಗುತ್ತಿರುವ ವೇತನ/ಸಂಭಾವನೆಯ ವಿವರಗಳನ್ನು ಒದಗಿಸುವಂತೆ ಅನೇಕ ಬಾರಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯನ್ನು ಕೋರಲಾಗಿದ್ದರೂ ವಿವರಗಳನ್ನು ನೀಡದ ಕಾರಣ ಲೆಕ್ಕ ಶೀರ್ಷಿಕೆ 2515-00-101-0-28 ಮತ್ತು 2515-00-102-0-61ರ ಆಬ್ಜೆಕ್ಟ್ ಹೆಡ್ 033 ಮತ್ತು 034ರಡಿ ಅನುದಾನವನ್ನು ಒದಗಿಸಲಾಗಿರುವುದಿಲ್ಲ.

ಸದರಿ ಸಿಬ್ಬಂದಿಯವರುಗಳ ವೇತನ ಮತ್ತು ಸಂಭಾವನೆಯನ್ನು ಪಾವತಿಸಬೇಕಾಗಿರುವುದನ್ನು ಮಾನವೀಯತೆಯ ಆಧಾರದ ಮೇಲೆ ಪರಿಗಣಿಸಿ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಗೆ ಪ್ರಸ್ತಾವಿತ ಲೆಕ್ಕ ಶೀರ್ಷಿಕೆಗಳ ಆಬ್ಜೆಕ್ಟ್ ಹೆಡ್ 090ರಡಿ ಬಿಡುಗಡೆಗೊಳಿಸಿರುವ ಅನುದಾನದಿಂದ ದಿನಗೂಲಿ/ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರ ವೇತನ/ಸಂಭಾವನೆ ವೆಚ್ಚವನ್ನು ಭರಿಸಲು ಆದೇಶದಲ್ಲಿ ತಿಳಿಸಲಾಗಿದೆ.

ಜಿಲ್ಲಾ ಪಂಚಾಯತಿಗಳು ಲೆಕ್ಕ ಶೀರ್ಷಿಕೆ 2515-00-101-0-28 ಮತ್ತು ತಾಲ್ಲೂಕು ಪಂಚಾಯತಿಗಳು ಲೆಕ್ಕ ಶೀರ್ಷಿಕೆ 2515-00-102-0-61ರಡಿ ವೇತನೇತರ ವೆಚ್ಚವನ್ನು ಭರಿಸಲು 2020-21ನೇ ಸಾಲಿನಲ್ಲಿ ಅನುಕ್ರಮವಾಗಿ ರೂ.3182.62ಲಕ್ಷ ಮತ್ತು ರೂ.2765.81ಲಕ್ಷಗಳನ್ನು ಒದಗಿಸಿದ್ದು (ಪ್ರತಿ ಲಗತ್ತಿಸಿದೆ). 6 ತಿಂಗಳಿಗೆ ವೇತನೇತರ ವೆಚ್ಚಕ್ಕಾಗಿ ಬಿಡುಗಡೆಗೊಳಿಸಿದ್ದು ಇದರಲ್ಲಿ ದಿನಗೂಲಿ/ಹೊರಗುತ್ತಿಗೆ ಸಿಬ್ಬಂದಿಯವರ ವೇತನ/ಸಂಭಾವನೆಯ ವೆಚ್ಚವನ್ನು ಭರಿಸಲು ತಿಳಿಸಲಾಗಿದೆ. ಆದಾಗ್ಯೂ ಹಲವಾರು ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಂದ ದಿನಗೂಲಿ/ಹೊರಗುತ್ತಿಗೆ ಸಿಬ್ಬಂದಿಯವರ ವೇತನ/ ಸಂಭಾವನೆ ಪಾವತಿಗಾಗಿ ಹೆಚ್ಚುವರಿ ಪ್ರಸ್ತಾವನೆಗಳು ಸ್ವೀಕೃತವಾಗುತ್ತಿದೆ.

ಈ ಬಗ್ಗೆ ಒದಗಿಸಿರುವ ಅನುದಾನ ಅಗತ್ಯವಿರುವ ಅನುದಾನದ ವಿವರಗಳನ್ನು ಸಂಬಂಧಿಸಿದ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಂದ ಪಡೆದು ಮಂಜೂರಾಗಿರುವ/ಭರ್ತಿಯಾಗಿರುವ ಮತ್ತು ತೆರವಾಗಿರುವ ಹುದ್ದೆಗಳ ವಿವರಗಳೊಂದಿಗೆ (ತೆರವಾಗಿರುವ ಹುದ್ದೆಗಳಿಗೆದುರಾಗಿ (ಡಿ ದರ್ಜೆ/ಬೆರಳಚ್ಚುಗಾರರು/ಶೀಘ್ರಲಿಪಿಗಾರರ ಹುದ್ದೆಯ ಶೇಕಡ 80ರಷ್ಟು) ಮೀರದಂತೆ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿರುವ ಸೇವೆಗಳ ವಿವರಗಳೊಂದಿಗೆ ಲೆಕ್ಕಾಚಾರ ಪಟ್ಟಿ ಮತ್ತು ಅಂಕಿ ಅಂಶಗಳ ವಿವರಗಳನ್ನು ಪಡೆದು ಪರಿಶೀಲಿಸಿ ಹೆಚ್ಚುವರಿ ಅಗತ್ಯವಿದ್ದಲ್ಲಿ ದಿನಗೂಲಿ/ಹೊರಗುತ್ತಿಗೆ ಸಿಬ್ಬಂದಿಯವರುಗಳ ವೇತನ/ಸಂಭಾವನೆಗಾಗಿ **ಕ್ರೋಡೀಕೃತ ಪ್ರಸ್ತಾವನೆಯನ್ನು ದಿನಾಂಕ:31.8.2020ರೊಳಗೆ ಸಲ್ಲಿಸುವಂತೆ ಕೋರಲಾಗಿದೆ.**

(ಸರ್ಕಾರದ ಕಾರ್ಯದರ್ಶಿಗಳು(ವೆಚ್ಚ)
ಆರ್ಥಿಕ ಇಲಾಖೆರವರಿಂದ ಅನುಮೋದಿತ)

(ಪುರುಷೋತ್ತಮ್ ಸಿಂಗ್ ಬಿ.ಹೆಚ್.)
ವಿಶೇಷಾಧಿಕಾರಿ (ಜಿ.ಪಂ.) ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಆಂತರಿಕ ಆರ್ಥಿಕ ಸಲಹೆಗಾರರು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

(ಪ್ರತಿಯನ್ನು ರಾಜ್ಯದ ಎಲ್ಲಾ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು/ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸೂಕ್ತ ಸಮರ್ಥನೆ/ಸ್ಪಷ್ಟೀಕರಣ/ಅಗತ್ಯ ಆದೇಶಗಳ ಪ್ರತಿಗಳೊಂದಿಗೆ ನಿಗದಿತ ವೇಳೆಯೊಳಗೆ ಗ್ರಾ.ಅ.ಪ. ಇಲಾಖೆಗೆ ಸಲ್ಲಿಸಲು ತಿಳಿಸಿದೆ. ನಂತರ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುವುದಿಲ್ಲ)